**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ**

**ಸಿ.ಸಿ.ನಂ.1871/2024**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ.1 : ಹಣಮಂತ ತಂದೆ ಬಸವರಾಜ ಬೈಯಾರ
ವಃ 18 ವರ್ಷ, ಉಃ ವಿದ್ಯಾರ್ಥಿ

2. ದಶರಥ ತಂದೆ ಕಾಶಪ್ಪ ಬೈಯಾರ
ವಃ 32 ವರ್ಷ, ಉಃ ಡ್ರೈವರ ಕಲಸ
ಇಬ್ಬರೂ ಸಾಃ ಮಳಖೇಡ ಗ್ರಾಮ,
ತಾಃ ಸೇಡಂ, ಜಿಃ ಕಲಬುರಗಿ

-----

**ಆಪಾದನೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 08-04-2024 ರಂದು ಮುಂಜಾನೆ 11.30 ಗಂಟೆ ಸುಮಾರಿಗೆ, ಮಳಖೇಡ ಪೊಲೀಸ ಠಾಣೆಯ ವಾಪ್ತಿಯ ಹದ್ದಿಯ ಪೈಕಿ ಚಾಸಾ.1 ಮತ್ತು ಚಾಸಾ.1 ರವರ ಗಂಡನಾದ ದಶರಥ ಇಬ್ಬರೂ ಹೈಯ್ಯಾಳ ಸಿದ್ದೇಶ್ವರ ದೇವರ ಪಲ್ಲಕಿಯ ದರ್ಶನ ಪಡೆಯಲು ಹೈಯಾಳ ಗ್ರಾಮಂದ ಮಳಖೇಡ ಗ್ರಾಮಕ್ಕೆ ಹೋಗಿ ದೇವರ ದರ್ಶನ ಪಡೆದುಕೊಂಡು ಮರಳಿ ಹೈಯ್ಯಾಳ ಗ್ರಾಮಕ್ಕೆ ಸೇಡಂ-ಕಲಬುರಗಿ ಮುಖ್ಯ ರಸ್ತೆಯ ಹೂಡಾ.ಕೆ. ಗೇಟ್ ಹತ್ತಿರ ಚಾಸಾ.1 ರವರ ಗಂಡನಾದ ದಶರಥ ಈತನು ತನ್ನ ಮೋಟಾರ ಸೈಕಲ ನಂ. TS13 EX 5810 ನೇದ್ದರ ಹಿಂದೆ ಚಾಸಾ.1ರವರನ್ನು ಕೂಡಿಸಿಕೊಂಡು ರಸ್ತೆಯ ಎಡಬದಿಯಲ್ಲಿ ಸೇಡಂ ಕಡೆ ಬರುವಾಗ ಸೇಡಂ ಕಡೆಯಿಂದ ಆರೋಪಿ.1 ನೇದ್ದವನು ತನ್ನ ವಶದಲ್ಲಿದ್ದ ಮೋಟಾರ ಸೈಕಲ ನಂ. KA-32 Y-7833 ನೇದ್ದನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಹೂಡಾ . ಕೆ. ಗೇಟ್ ಹತ್ತಿರ ಹೈಯ್ಯಾಳ ಗ್ರಾಮಕ್ಕೆ ಹೊರಟ ಚಾಸಾ.1 ರವರ ಮೋಟಾರ ಸೈಕಲಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದ್ದು, ಕಾರಣ ಆರೋಪಿತರಾದ ನೀವು ಭಾ.ದಂ.ಸಂ. ಕಲಂ. 279 ಸಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆಪಾದಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಚಾಸಾ.1 ರವರ ಗಂಡನಾದ ದಶರಥ ಈತನು ತನ್ನ ಮೋಟಾರ ಸೈಕಲ ನಂ. TS13 EX 5810 ನೇದ್ದರ ಹಿಂದೆ ಚಾಸಾ.1ರವರನ್ನು ಕೂಡಿಸಿಕೊಂಡು ರಸ್ತೆಯ ಎಡಬದಿಯಲ್ಲಿ ಸೇಡಂ ಕಡೆ ಬರುವಾಗ ಸೇಡಂ ಕಡೆಯಿಂದ ಆರೋಪಿ.1 ನೇದ್ದವನು ತನ್ನ ವಶ ದಲ್ಲಿದ್ದ

ಮೋಟಾರ ಸೈಕಲ ನಂ. KA-32 Y-7833 ನೇದ್ದನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಹೂಡಾ . ಕೆ. ಗೇಟ್ ಹತ್ತಿರ ಹೈಯ್ಯಾಳ ಗ್ರಾಮಕ್ಕೆ ಹೊರಟ ಚಾಸಾ.1 ರವರ ಮೋಟಾರ ಸೈಕಲಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದ್ದು ಚಾಸಾ.1 ರವರಿಗೆ ಸಾದಾ ಗಾಯಗಳಾಗಿದ್ದು, ಚಾಸಾ.1 ರವರ ಗಂಡನಾದ ದಶರಥ ಈತನಿಗೆ ಭಾರಿ ರಕ್ತಗಾಯಗಳಾದಾಗ ಅಪಘಾತ ಸ್ಥಳಕ್ಕೆ ಬಂದ ಚಾಸಾ.6 ರವರು & ಚಾಸಾ.1 ರರು ದಶರಥ ಈತನಿಗೆ 108 ಅಂಬುಲೆನ್ಸ್‌ದಲ್ಲಿ ಉಪಚಾರ ಕುರಿತು ಕಲಬುರಗಿಯ ಜಿಮ್ಸ ಸರಕಾರಿ ಆಸ್ಪತ್ರೆಗೆ ತಂದು ಸೇರಿಕೆ ಮಾಡಿದಾಗ ದಶರಥ ಈತನು ಉಪಚಾರ ಪಡೆಯುತ್ತಾ ಅಂದು ಮದಾಹ್ನ 01.00 ಗಂಟೆ ಸುಮಾರಿಗೆ ಉಪಚಾರ ಫಲಿಸದೇ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು ಇರುತ್ತದೆ, ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ. 304(ಎ) ಸಂ. 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆಪಾದಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಆರೋಪಿ.2 ನೇದ್ದವನು ತನ್ನ ವಾಹನಕ್ಕೆ ವಿಮೆ ಇಲ್ಲದೇ , ತನ್ನ ವಾಹನವನ್ನು ಚಾಲನಾ ಪರವಾನಿಗೆ ಪತ್ರ ಇಲ್ಲದವನಿಗೆ ವಾಹನ ಚಲಾಯಿಸಲು ಕೊಟ್ಟಿದ್ದರಿಂದ ಕಲಂ 180 ಐ ಎಮ್ ಆಕ್ಟ ಸಂ. 34 ಐಪಿಸಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆಪಾದಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಆರೋಪಿ.1 ನೇದ್ದವನು ತನ್ನ ವಶದಲ್ಲಿದ್ದ ಮೋಟಾರ ಸೈಕಲನ್ನು ಚಾಲನಾ ಪರವಾನಿಗೆ ಇಲ್ಲದೆ ವಾಹನ ಚಲಾಯಿಸಿದ್ದು ಕಾರಣ ಆರೋಪಿತನಾದ ನೀನು ಕಲಂ 181 ಐ.ಎಮ್.ವಿ. ಆಕ್ಟ ಸಂಗಡ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಐದನೆಯದಾಗಿ ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಆರೋಪಿ.1 ನೇದ್ದವನು ತನ್ನ ವಶದಲ್ಲಿದ್ದ ಮೋಟಾರ ಸೈಕಲನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿ ಚಾಸಾ.1 ರವರ ಮೋಟಾರ ಸೈಕಲಗೆ ಡಿಕ್ಕಿ ಪಡಿಸಿ ಅಪಪಘಾತ ಮಾಡಿ ತನ್ನ ವಶದಲ್ಲಿದ್ದ ಮೋಟಾರ ಸೈಕಲನ್ನು ಸದ್ಧಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದು, ಕಾರಣ ಆರೋಪಿತನಾದ ನೀನು ಐ.ಎಮ್.ವಿ. ಆಕ್ಟ 187ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ,

ಕೊನೆಯದಾಗಿ ಮೇಲೆ ಹೇಳಲಾದ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆಪಾದಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಆರೋಪಿ.2 ನೇದ್ದವನು ತನ್ನ ವಾಹನಕ್ಕೆ ವಿಮೆ ಮಾಡಿಸದೇ ಚಾಲನಾ ಪರವಾನಿಗೆ ಪತ್ರ ಇಲ್ಲದವನಿಗೆ ವಾಹನ ಚಲಾಯಿಸಲು ಕೊಟ್ಟಿದ್ದು, ಕಾರಣ ಆರೋಪಿತನಾದ ನೀನು ಕಲಂ 196 ಐ.ಎಮ್.ವಿ. ಆಕ್ಟ ಸಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

(ಆರೋಪಣೆಯನ್ನು ಆರೋಪಿತರಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

ಸಹಿ/-

ದಿನಾಂಕ 07-02-2026 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ**

**ಸಿ.ಸಿ.ನಂ.1871/2024**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿಃ1 ಹಣಮಂತ ತಂದೆ ಬಸವರಾಜ ಬೈಯಾರ<br>ವಃ 18 ವರ್ಷ, ಉಃ ವಿದ್ಯಾರ್ಥಿ<br>ಸಾಃ ಮಳಖೇಡ ಗ್ರಾಮ,<br>ತಾಃ ಸೇಡಂ, ಜಿಃ ಕಲಬುರಗಿ ಹಾಗೂ ಇನ್ನೊಬ್ಬರು

**ಆವಾದನೆ**

ಪ್ರಃ-1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿಯಾ?

ಉತ್ತರಃ-ಆ-1

ಆ-2

ಪ್ರಃ-2) ನೀನು ತಪ್ಪನ್ನು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ-ಆ-1

ಆ-2

ಸಹಿ/-

ದಿನಾಂಕಃ 07-02-2026 ಪ್ರ.ದ.ನ್ಯಾ.ದಂ. ಸೇಡಂ.